**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ- ಶ್ರೀ ಎಂ ಸಿ ಪಿ ವಕೀಲರಿಂದ ವಾದಿಯ ಪರವಾಗಿ.**

4. ನಾನು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮಾಹಿತಿ 1 ನೇ ಪ್ರತಿವಾದಿ ನೀಡಿರುತ್ತಾರೆ. ಈ ದಾವೆಯನ್ನು 1 ನೇ ಪ್ರತಿವಾದಿಯ ತಂಗಿ ಅವರ ಮೇಲೆ ಆಸ್ತಿಯಲ್ಲಿ ಪಾಲು ಕೇಳಿ ದಾಖಲಿಸಿರುತ್ತಾರೆ. ವಾದಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ. 1 ನೇ ಪ್ರತಿವಾದಿಯವರು ಕ್ರಯ ಪತ್ರ ಹಾಗೂ ಪಹಣಿಗಳನ್ನು ಹಾಜರು ಪಡಿಸಿರುತ್ತಾರೆ. ವಾದಿ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಎಂದು ಗೊತ್ತಿಲ್ಲ. ನನಗೆ 2018 ರಿಂದ ಪ್ರತಿವಾದಿಯ ಪರಿಚಯ ಇರುತ್ತದೆ. ನನಗೆ ವಾದಿಯ ಪರಿಚಯ ಇರುವುದಿಲ್ಲ. ನಮ್ಮ ತಕರಾರನ್ನು ನಾವೇ ಬರೆಸಿ ಸಲ್ಲಿಸಿರುತ್ತೇವೆ. ಅದಕ್ಕೆ ಮಾಹಿತಿಯನ್ನು 1 ನೇ ಪ್ರತಿವಾದಿ ನೀಡಿರುತ್ತಾರೆ. ನನಗೆ ನಮ್ಮ ತಕರಾರಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರು ಸಲ್ಲಿಸಿರುವ ತಕರಾರಿನ ಬಗ್ಗೆ ಮಾಹಿತಿ ಇರುವುದಿಲ್ಲ. ಅವರ ತಕರಾರನ್ನು ನಾನು ಅಳವಡಿಸಿಕೊಂಡಿರುವುದಿಲ್ಲ.

5. ನನಗೆ ಮೂಕಮ್ಮ ಅಲಿಯಾಸ್ ನಾಗಮ್ಮ ಗೊತ್ತಿರುವುದಿಲ್ಲ. ಆಕೆಯ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗಳನ್ನು ಯಾರು ಉಳಿಮೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಮಹಾಂತಮ್ಮ ದಾವಾಸ್ವತ್ತುಗಳನ್ನು ಉಳಿಮೆ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ದಾವಾಸ್ವತ್ತುನ್ನು ಖರೀದಿ ಮಾಡಿದಾಗ ದಾವೆ ಇದ್ದ ಬಗ್ಗೆ ಮಾಹಿತಿ ಇರಲಿಲ್ಲ. 1 ನೇ ಪ್ರತಿವಾದಿ ದಾವೆ ಇದ್ದ ಬಗ್ಗೆ ತಿಳಿಸಿರಲಿಲ್ಲ. ಈ ದಾವೆ ದಿಃ05.06.2018 ರಂದು ಚಾಲ್ತಿಯಲ್ಲಿದಾಗ ಪರಿಶೀಲನೆ ಮಾಡದೇ ದಾವಾಸ್ವತ್ತನ್ನು ಖರೀದಿಸಿರುತ್ತೇವೆ ಎಂದರೆ ಸರಿ.

6. ದಾವಾಸ್ವತ್ತನ್ನು ಖರೀದಿಸುವಾಗ ಕ್ರಯಪತ್ರ ಹಾಗೂ ಪಹಣಿ ಪತ್ರಗಳನ್ನು ನೋಡಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಖರೀದಿ ಮಾಡುವ ಮೊದಲು ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನೋಡಿರುತ್ತೇನೆ. ಅದರಲ್ಲಿ ನ್ಯಾಯಾಲಯದ ಆದೇಶ ನಮೂದಿಸಿರಲಿಲ್ಲ. ಊರಲ್ಲಿ ದಾವಾಸ್ವತ್ತು ಖರೀದಿ ಮಾಡುವ ಮೊದಲು ವಿಚಾರಣೆ ಮಾಡಿದಾಗ 1 ನೇ ಪ್ರತಿವಾದಿಯವರು ಉಳಿಮೆ ಮಾಡುತ್ತಿದ್ದರು ಎಂದು ತಿಳಿದು ಬಂದಿರುತ್ತದೆ. ದಾವಾಸ್ವತ್ತಿನ ಪಕ್ಕದ ಜಮೀನಿನವರಾದ ರಮೇಶ್ ರವರನ್ನು ವಿಚಾರಣೆ ಮಾಡಿರುತ್ತೇನೆ. 1 ನೇ ಪ್ರತಿವಾದಿಯವರಿಗೆ ದಾವಾಸ್ವತ್ತು ಪಿರ್ತಾರ್ಜಿತವಾಗಿ

ಬಂದಿರುತ್ತದೆ. ಅದನ್ನು ಪರಿಶೀಲಿಸಲು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳನ್ನು ನೋಡಿದೇ ದಾವಾಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ.

7. ದಾವಾಸ್ವತ್ತನ್ನು ಖರೀದಿಸುವ ಒಂದು ತಿಂಗಳ ಮೊದಲು ದಾವಾಸ್ವತ್ತಿಗೆ ಭೇಟಿ ನೀಡಿರುತ್ತೇನೆ. ಅದಕ್ಕಿಂತ ಮೊದಲು ದಾವಾಸ್ವತ್ತನ್ನು ನೋಡಿರುವುದಿಲ್ಲ. ಆಗ ಯಾ ಸ್ವಾಧೀನದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ದಾವಾಸ್ವತ್ತಿಗೆ ಭೇಟಿ ನೀಡುವ ಮೊದಲು 1 ನೇ ವಾದಿ ಸ್ವಾಧೀನದಲ್ಲಿ ಇದ್ದರು ಎಂದರೆ ಗೊತ್ತಿಲ್ಲ. ನನಗೆ ಈ ಬಗ್ಗೆ ಮಾಹಿತಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಮಾಡುವ ಮೊದಲು ವಕೀಲರಿಂದ ಸಲಹೆ ಪಡೆದಿರುತ್ತೇನೆ. ಅವರ ಹೆಸರು ಈಗ ನೆನಪಿಲ್ಲ. ನಾನು ಯಾವುದೇ ಕಾನೂನು ಸಲಹೆ ಪಡೆಯದೇ ದಾವಾಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆ ಇರುವ ಬಗ್ಗೆ ನನಗೆ ಮಾಹಿತಿ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಕ್ರಯ ಪತ್ರ ಮಾಡಿಕೊಳ್ಳುವ ಮೊದಲು ಕ್ರಯಕರಾರು ಪತ್ರ ಮಾಡಿಕೊಂಡಿದೆ. ಈ ವಿಷಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ವಾದಿಯವರಿಗೆ ಸೇರಿದ ಸ್ವತ್ತುಗಳನ್ನು ಲಪಟಾಯಿಸಲು ಸುಳ್ಳು ಕ್ರಯಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾರಿಗಳ ಜೊತೆ ಶರೀಖ್ ಆಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಜವಾದ ಖರೀದಿದಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ